0305/0725

**Third Semester of Three Years LL.B. Seventh Semester of 5 Yrs. B.A. LL.B./ B.B.A. LL.B Examination, December 2012**

# PROFESSIONAL ETHICS AND PROFESSIONAL ACCOUNTING SYSTEM

**(Clinical Course – I) (Course – V)**

Duration : 2½ Hours | Max. Marks : 80

**Instructions** : 1. Answer all **5** Questions.
ಎಲ್ಲಾ ಐದು ಪ್ರಶ್ನೆಗಳನ್ನು ಉತ್ತರಿಸಿರಿ.

2. Marks are indicated against **each** questions.
ಅಂಕಗಳನ್ನು ಪ್ರತಿ ಪ್ರಶ್ನೆಗಳ ಮುಂದೆ ಸೂಚಿಸಿದೆ.

## UNIT – I

Q. No. 1. (a) What are the reasons and objects of passing of Advocates Act 1961 ? Marks : 10

ವಕೀಲರ ಅಧಿನಿಯಮ 1961ನ್ನು ಜಾರಿಗೊಳಿಸಲು ಸಾಧ್ಯವಾದ ಕಾರಣಗಳು ಮತ್ತು ಉದ್ದೇಶಗಳು ಯಾವುವು ?

OR/ಅಥವಾ

What are the equipments of an advocate to become a successful advocate ?

ಓರ್ವ ಪರಿಪೂರ್ಣ ನ್ಯಾಯವಾದಿಯಾಗಲು ಆತನಲ್ಲಿ ಇರಬೇಕಾದ ಸಾಧನಗಳು ಯಾವುವು ?

(b) Write a note on : Marks : 6

ಟಿಪ್ಪಣಿ ಬರೆಯಿರಿ :

Development of legal profession during British period.

ಬ್ರಿಟೀಷ್ ಆಳ್ವಿಕೆ ಕಾಲದಲ್ಲಿ ವಕೀಲ ವೃತ್ತಿಯ ಬೆಳವಣಿಗೆ.

OR/ಅಥವಾ

What are the conditions enumerated under Section 24(1) of Advocates Act.

ವಕೀಲರ ಅಧಿನಿಯಮದ ಕಲಂ 24(1)ರಲ್ಲಿ ತಿಳಿಸಲಾಗಿರುವ ಷರತ್ತುಗಳು ಯಾವುವು ?

P.T.O.

## UNIT – II

Q. No. 2. (a) What are the duties of an advocate towards the court ? Marks : 10

ನ್ಯಾಯಾಲಯಗಳ ಸಂಬಂಧ ನ್ಯಾಯವಾದಿಯ ಕರ್ತವ್ಯಗಳನ್ನು ತಿಳಿಸಿರಿ.

OR/ಅಥವಾ

Describe the duties of which an advocate owes towards the witnesses.

ಕಕ್ಷಿದಾರರ ಸಂಬಂಧ ನ್ಯಾಯವಾದಿಯ ಕರ್ತವ್ಯಗಳನ್ನು ವಿವರಿಸಿ.

(b) Write a note on : Marks : 6

ಟಿಪ್ಪಣಿ ಬರೆಯಿರಿ :

Procedure to be followed by the Disciplinary Committee of State Bar Council after receiving the complaint.

ಫಿರ್ಯಾದು ದಾಖಲಿಸಿಕೊಂಡ ಬಳಿಕ ರಾಜ್ಯ ವಕೀಲ ಮಂಡಳಿಯ ಶಿಸ್ತು ಪಾಲನಾ ಸಮಿತಿಯು ಅನುಸರಿಸಬೇಕಾದ ವಿಧಾನ.

OR/ಅಥವಾ

When an advocate may refuse to accept a brief ?

ಯಾವಾಗ ನ್ಯಾಯವಾದಿಯು ಪ್ರಕರಣವನ್ನು ಸ್ವೀಕರಿಸಲು ನಿರಾಕರಿಸಬಹುದು ?

## UNIT – III

Q. No. 3. (a) Enumerate the essentials of civil and criminal contempt. Marks : 10

ದಿವಾನಿ ಮತ್ತು ಅಪರಾಧಿಕ ನ್ಯಾಯಾಂಗ ನಿಂದನೆಯ ಪ್ರಮುಖ ಅಂಶಗಳನ್ನು ತಿಳಿಸಿರಿ.

OR/ಅಥವಾ

What is the Constitutional validity of Contempt of Court Act 1971 ?

ನ್ಯಾಯಾಂಗ ನಿಂಧನೆ ಅಧಿನಿಯಮ 1971ರ ಸಾಂವಿಧಾನಿಕ ಬದ್ಧತೆಯನ್ನು ತಿಳಿಸಿರಿ.

(b) Answer the following problem : Marks : 6

ಕೆಳಗಿನ ಪ್ರಕರಣಗಳನ್ನು ಉತ್ತರಿಸಿ :

'A' a junior advocate took money from his client to pay bribe to a doctor to obtain a medical certificate. The complainant filed a complaint against the advocate to the State Bar Council. Whether this amounts to professional misconduct. Explain with reference to Chandra Shekar Soni V/s Bar Council of Rajasthan and others AIR 1983 SC 1012.

ವೈದ್ಯಾಧಿಕಾರಿಯಿಂದ ಒಂದು ಆರೋಗ್ಯ ದೃಢಪತ್ರವನ್ನು ಪಡೆಯಲು ಲಂಚ ನೀಡುವ ಸಲುವಾಗಿ ಯುವ ನ್ಯಾಯವಾದಿಯೋರ್ವನು ತನ್ನ ಕಕ್ಷಿದಾರನಿಂದ ಹಣ ಸ್ವೀಕರಿಸುವನು. ಫಿರ್ಯಾಧಿದಾರನು ಸದರಿ ನ್ಯಾಯವಾದಿಯ ವಿರುದ್ಧವಾಗಿ ಒಂದು ಫಿರ್ಯಾಧಿಯನ್ನು ರಾಜ್ಯ ವಕೀಲ ಮಂಡಳಿ ಸಮ್ಮುಖ ದಾಖಲಿಸುವನು. ಚಂದ್ರಶೇಖರ ಸೋನಿ ವಿರುದ್ಧ ರಾಜಸ್ಥಾನ ವಕೀಲ ಮಂಡಳಿ ಮತ್ತು ಇತರರು AIR 1983 SC 1012 ಈ ಪ್ರಕರಣದ ಹಿನ್ನಲೆಯಲ್ಲಿ ನ್ಯಾಯವಾದಿಯ ವಿವಾದಿತ ನಡವಳಿಕೆ ವೃತ್ತಿ ದುರ್ನಡತೆ ಅನ್ನಿಸುವುದೇ ?

OR/ಅಥವಾ

Mr. X handedover two promissory notes to V.C. Ranga Dorai to file suits and paid fees. The advocate filed a suits on one of the promissory note only and he did not represent it in the courts. He told lies that the suits had been filed. The complainant came to know the facts. They made a complaint to State Bar Council. Decide the case in the light of V.C. Ranga Dorai V/s D. Gopalan and others AIR 1979 SC 201.

ಮಿ. X ಎರಡು ವಚನಪತ್ರಗಳನ್ನು ದಾವೆ ಹೂಡಲು ನ್ಯಾಯವಾದಿ ವಿ.ಸಿ. ರಂಗದೊರೆಯ್‌ಗೆ ಕೊಟ್ಟರು. ಹಾಗೆ ದಾವೆ ಶುಲ್ಕವನ್ನು ಪಾವತಿಸಿದರು. ನ್ಯಾಯವಾದಿ ಒಂದು ವಚನಪತ್ರದ ಮೇಲೆ ದಾವೆ ಹೂಡಿದರು. ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಿಲ್ಲ ಮತ್ತು ಅವರು ದಾವೆ ಹೂಡಿದ್ದಾಗಿ ಸುಳ್ಳು ಆಶ್ವಾಸನೆಯನ್ನು ನೀಡಿದರು. ಈ ವಿಚಾರವು ಆಪಾದಕನಿಗೆ ತಿಳಿದು ಬಂತು. ಆದುದ್ದರಿಂದ ಅವರು ರಾಜ್ಯ ವಕೀಲ ಮಂಡಳಿಯವರಿಗೆ ನ್ಯಾಯವಾದಿಯ ವಿರುದ್ಧ ದೂರು ನೀಡಿದರು. ಈ ಪ್ರಕರಣವನ್ನು ವಿ.ಸಿ. ರಂಗದೊರೆಯ್ V/s ಡಿ. ಗೋಪಾಲನ್ ಅಂಡ್ ಅದರ್ಸ್ AIR 1979 SC 201 ಪ್ರಕಾರ ತೀರ್ಮಾನಿಸಿ.

## UNIT – IV

Q. No. 4. (a) Mr. R intended to purchase a plot in a housing society. He paid 20,000 as application money. Thereafter he heard nothing from the society. It was found that he was duped by the housing society. So he engaged Mr. Y as advocate and paid 3,000 Rs. as fees to file a suit against the housing society and issued a notice. Thereafter nothing had happened and the suit also was not filed. In the meantime Mr. R filed a complaint before the police against the society and got it settled. So he requested Mr. Y to furnish account of the case and return balance amount. However the advocate failed to repay inspite of many remainders, advice Mr. X in the light of D.C. Appeal No. 8/1994. Marks : 10

Rನು ಒಂದು ಮನೆ ನಿವೇಶನವನ್ನು ಖರೀದಿಸಲು ಇಚ್ಛಿಸಿ ಹೌಸಿಂಗ್ ಸೊಸೈಟಿಗೆ ತನ್ನ ಅರ್ಜಿ ಬಾಬ್ತು ರೂ. 20,000ವನ್ನು ಮುಂಗಡ ಪಾವತಿಸುತ್ತಾನೆ. ಆ ನಂತರ ಸೊಸೈಟಿಯಿಂದ ಸಮರ್ಪಕ ಪ್ರತಿಕ್ರಿಯೆ ಸಿಗದಿರುವ ಹಿನ್ನೆಲೆಯಲ್ಲಿ, ತಾನು ಮೋಸಗೊಂಡಿರುತ್ತೇನೆಂದು ಖಚಿತವಾಗುತ್ತದೆ. Rನು ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಲು ಇಚ್ಛಿಸಿ Y ಎಂಬ ವಕೀಲನನ್ನು ನಿಯೋಜನೆಗೊಳಿಸಿ

ಮುಂಗಡವಾಗಿ ರೂ. 3,000ನ್ನು ಕೊಟ್ಟು ದಾವಾ ಸಲ್ಲಿಸುವಂತೆ ತಿಳಿಸಿದನು. ಸದರಿ ವಕೀಲನು ಸೊಸೈಟಿಗೆ ಒಂದು ಕಾನೂನಿನ ನೋಟೀಸನ್ನು ಜಾರಿಮಾಡಿದ ಹೊರತಾಗಿ, ತನ್ನ ಕಕ್ಷಿದಾರ R ಪರವಾಗಿ ಯಾವುದೇ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲು ವಿಫಲನಾಗುವನು. ಈ ಹಂತದಲ್ಲಿ Rನು ಪೋಲೀಸ್ ಠಾಣೆಗೆ ಸೊಸೈಟಿ ವಿರುದ್ಧ ಫಿರ್ಯಾದು ದಾಖಲಿಸಿ ನಂತರ ಆ ಪ್ರಕರಣವನ್ನು ಬಗೆಹರಿಸಿಕೊಂಡನು. ಇದಾದ ನಂತರ Rನು ತಾನು ವಕೀಲರಿಗೆ ಕೊಟ್ಟ ಶುಲ್ಕವನ್ನು ವಾಪಸ್ಸು ಮಾಡುವಂತೆ ಕೋರುವನು. ಆದರೆ ವಕೀಲನು ಈ ಬಗ್ಗೆ ಸಮರ್ಪಕವಾಗಿ ಪ್ರತಿಕ್ರಿಯಿಸುತ್ತಿಲ್ಲ. ಈ ವಿವಾದವನ್ನು D.C. Appeal No. 8/1994 ಪ್ರಕರಣದ ಹಿನ್ನಲೆಯಲ್ಲಿ ಬಗೆಹರಿಸಿರಿ.

OR/ಅಥವಾ

Mr. Kumar made a complaint against Mr. Ravi an advocate, alleging that he had engaged him to vacate a house from the tenant and paid the fees, to file a suit and to inform him the progress of his proceeding. However inspite of several remainders to the advocate, failed to inform the progress of the case. Whether this amount to professional misconduct. Decide in the light of D.C. Appeal No. 33/1996.

ಮಿ. ಕುಮಾರ್ ಎಂಬುವವರು ಮಿ. ರವಿಯ ಮೇಲೆ ಈ ರೀತಿ ದಾವೆ ಹೂಡಿದರು. ಬಾಡಿಗೆದಾರನನ್ನು ಮನೆಯಿಂದ ಖಾಲಿಗೊಳಿಸಲು ನ್ಯಾಯಾಲಯದಲ್ಲಿ ಒಂದು ಸಮರ್ಪಕ ದಾವೆಯನ್ನು ಹೂಡುವಂತೆಯೂ ಆಗಾಗ್ಗೆ ಪ್ರಕರಣದ ವಿಚಾರಣೆಯ ಬೆಳವಣಿಗೆಯ ಬಗ್ಗೆ ತಿಳಿಸುವಂತೆಯೂ ಕೋರಿ, ಹಾಗೆಯೇ ಮುಂಗಡವಾಗಿ ಶುಲ್ಕ ಬಾಬ್ತು ನೀಡಿ, ಬಾಡಿಗೆ ಮನೆಯ ಮಾಲೀಕರು ವಕೀಲರನ್ನು ಕೋರಿಕೊಂಡರು. ಮಾಲೀಕರ ನಿರಂತರ ಹಲವಾರು ಸೂಚನೆಯ ಹೊರತಾಗಿಯೂ ವಕೀಲರು ಪ್ರಕರಣದ ವಿಚಾರಣೆಯ ಮಾಹಿತಿಯನ್ನು ಮಾಲೀಕರಿಗೆ ಒದಗಿಸಲು ವಿಫಲವಾಗಿರುತ್ತಾರೆ. ವಕೀಲರ ಈ ಪ್ರವೃತ್ತಿ ವೃತ್ತೀಯ ದುರ್ನಡತೆ ಎನಿಸುವುದೇ ಎಂಬುದನ್ನು D.C. Appeal No. 33/1996 ಪ್ರಕರಣದ ಹಿನ್ನಲೆಯಲ್ಲಿ ಪರಿಹರಿಸಿರಿ.

(b) Answer the following : Marks : 6

ಕೆಳಗಿನವುಗಳನ್ನು ಉತ್ತರಿಸಿರಿ :

'A' a Chief Minister of a State at a press conference charged the Judiciary with serious remarks. He asserted that law grinds the poor and richman rule the law. He further said that the Judiciary works against workers, peasants and other section of this working classes. Whether this amounts to contempt of court ?

'A' ರಾಜ್ಯದ ಮುಖ್ಯಮಂತ್ರಿ ಪತ್ರಕರ್ತರ ಸಭೆಯಲ್ಲಿ ನ್ಯಾಯಾಂಗ ವಿರುದ್ಧ ಗಂಭೀರ ಆಪಾದನೆಯನ್ನು ಮಾಡಿದರು. ಕಾನೂನು ಬಡವರನ್ನು ಶಿಕ್ಷಿಸುತ್ತಿದೆ. ಆದರೆ ಶ್ರೀಮಂತರಿಗೆ ಕಾನೂನು ಅನ್ವಯಿಸುವುದಿಲ್ಲ ಮತ್ತು ನ್ಯಾಯಾಂಗ ಕಾರ್ಮಿಕ ವಿರುದ್ಧ, ರೈತರ ವಿರುದ್ಧ ಮತ್ತು ಇದರ ಬಡ ವರ್ಗಗಳ ವಿರುದ್ಧ ಕಾರ್ಯವನ್ನು ಮಾಡುತ್ತದೆ ಎಂದು ಅಪವಾದಿಸಿದರು. ಇದು ನ್ಯಾಯಾಲಯದ ನಿಂದನೆಯೇ ? ಪರಿಶೀಲಿಸಿ.

OR/ಅಥವಾ

District Munsiff has made certain remarks in his Judgement against a advocate who appeared for the defendant in the case. The advocate took serious note of the same, issued a notice under Section 80 to the Munsiff demanding the damages to the tune of Rs. 25,000 in making such remarks in his Judgement. Does this amount to professional misconduct ?

ಜಿಲ್ಲಾ ನ್ಯಾಯಾಧೀಶರು ಒಂದು ದಾವೆಯಲ್ಲಿ ತನ್ನ ತೀರ್ಪನ್ನು ಬರೆಯುತ್ತಾ ಪ್ರತಿವಾದಿಯನ್ನು ಪ್ರತಿನಿಧಿಸಿದ ವಕೀಲರ ವಿರುದ್ಧವಾಗಿ ಕೆಲವೊಂದು ವಿಚಾರಗಳನ್ನು ಉಲ್ಲೇಖಿಸಿದರು. ಸದರಿ ವಕೀಲರು ಈ ಬಗ್ಗೆ ಕಲಂ 80ರಲ್ಲಿ ಸದರಿ ನ್ಯಾಯಾಧೀಶರಿಗೆ ನೋಟೀಸು ಕಳುಹಿಸಿ ತನಗೆ ಆಗಿರುವ ಮಾನಸಿಕ ನೋವಿಗೆ ರೂ. 25,000 ಪರಿಹಾರ ಕೊಡುವಂತೆ ತಿಳಿಸಿದರು. ಇದೀಗ ವಕೀಲರ ಈ ನಡೆತೆಯು ವೃತ್ತೀಯ ದುರ್ನಡತೆ ಎನಿಸುವುದೇ ?

## UNIT – V

Q. No. 5. (a) What are the advantages of lawyer for maintaining account book ? Marks : 10

ಲೆಕ್ಕ ಪುಸ್ತಕ ದಾಖಲೆಗಳನ್ನು ಇಟ್ಟುಕೊಳ್ಳುವುದರಿಂದ ನ್ಯಾಯವಾದಿಗೆ ಆಗುವ ಅನುಕೂಲಗಳೇನು ?

OR/ಅಥವಾ

Which are the accounts involved in maintaining book of account ?

ಲೆಕ್ಕ ಪುಸ್ತಕ ದಾಖಲೆಗಳಲ್ಲಿ ನಮೂದಿಸಬಹುದಾದ ಲೆಕ್ಕ ವ್ಯವಹಾರಗಳು ಯಾವುವು ?

(b) Write a note on : Marks : 6

ಟಿಪ್ಪಣಿ ಬರೆಯಿರಿ :

Ledger

ಲೆಡ್ಜರ್

OR/ಅಥವಾ

Balance Sheet

ಬ್ಯಾಲೆನ್ಸ್ ಶೀಟ್

---

0305

**Third Semester of Three Year LL.B. Examination, June/July 2012**
**PROFESSIONAL ETHICS AND PROFESSIONAL ACCOUNTING SYSTEM**
**(Clinical Course – I)**

Duration : $2^1/_2$ Hours Max. Marks : 80

**Instructions**: 1. Answer all **5** Questions.
ಎಲ್ಲ **5** ಪ್ರಶ್ನೆಗಳಿಗೆ ಉತ್ತರಿಸಿ.
2. Marks are indicated against **each** question.
ಪ್ರತಿ ಪ್ರಶ್ನೆಗಳ ಮುಂದೆ ಅಂಕಗಳನ್ನು ಸೂಚಿಸಿದೆ.

**UNIT – I**

Q. No. 1. (a) Explain the functions of Bar Council of India. Marks : 10

ಭಾರತೀಯ ವಕೀಲರ ಪರಿಷತ್ತಿನ ಕಾರ್ಯಗಳನ್ನು ವಿವರಿಸಿ.

OR/ಅಥವಾ

Who is a senior advocate ? What are the restrictions imposed on them ?

ಹಿರಿಯ ನ್ಯಾಯವಾದಿ ಎಂದರೆ ಯಾರು ? ಅವರ ಮೇಲೆ ಇರುವ ನಿರ್ಬಂಧಗಳು ಯಾವುವು ?

(b) Write a note on : Marks : 6
ಟಿಪ್ಪಣಿ ಬರೆಯಿರಿ :

Professional conduct in general

ಸಾಮಾನ್ಯವಾಗಿ ಪಾಲಿಸಬೇಕಾದ ವೃತ್ತಿಯ ನಡತೆಗಳು

OR/ಅಥವಾ

Suggestions of Krishnaswamy Iyyer on meeting the clients.

ಕಕ್ಷಿದಾರರ ಸಂದರ್ಶನ ಕುರಿತು ಕೃಷ್ಣಸ್ವಾಮಿ ಅಯ್ಯರ್ ಅವರ ಸಲಹೆಗಳು.

P.T.O.